ಸಾಕ್ಷಿಯನ್ನು ದಿಃ**24.06.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎಸ್.ಬಿ.ಎಂ. ವಕೀಲರಿಂದಃ-**

ಕುಣಿಯನ ಜವರನಾಯಕ ಎಂಬುವವರು ನನ್ನ ತಾತನ ತಂದೆ ಅವರು 1955 ರಲ್ಲಿ ತೀರಿಕೊಂಡಿರುತ್ತಾರೆ. ಎಸಿ ಕೋರ್ಟ್ ನಲ್ಲಿ ಹಾಕಿರುವ ಕೇಸ್ ವಜಾ ಆಗಿದೆ ಎಂದು ಹೇಳಿದ್ದು, ಅದನ್ನು ಕುಣಿಯನ ಜವರನಾಯಕ ಎಂಬುವವರು ಹೆಸರಿನಲ್ಲಿ ಹಾಕಲಾಗಿತ್ತು ಎಂದರೆ ಸಾಕ್ಷಿ ನಮ್ಮ ತಾತ ಜವರನಾಯಕ ಎಂಬುವವರು ತಪ್ಪಾಗಿ ಕುಣಿಯನ ಜವರನಾಯಕ ಎಂದು ನಮೂದಿಸಿ ಹಾಕಿರುತ್ತಾರೆ ಎನ್ನುತ್ತಾರೆ. ಸದರಿ ವಿಷಯವನ್ನು ನಮ್ಮ ವಕೀಲರಿಗೆ ಕೇಸ್ ಹಾಕುವ ಸಮಯದಲ್ಲಿ ಹೇಳಿದ್ದೇವೆ. ಬೋಗ್ಯ ಮಾಡಿರುವ ವಿಷಯವನ್ನು ಎಸಿ ಕೋರ್ಟ್ ನಲ್ಲಿ ನನ್ನ ತಾತ ಹೇಳಿದ್ದರು. ಯಾವ ಸಾಲಿನಲ್ಲಿ ಬೋಗ್ಯ ಮಾಡಲಾಗಿತ್ತು ಅದನ್ನು ಯಾವಾಗ ಬಿಡಿಸಿಕೊಳ್ಳಲಾಗಿತ್ತು ಎಂಬುದನ್ನು ಹೇಳಿದ್ದರು. ಸದರಿ ಎಸಿ ಕೋರ್ಟ್ ನ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ. ಹಾಗೆ ಬೋಗ್ಯ ಹಾಕಿದ ವಿಷಯವನ್ನು ಎಸಿ ಕೋರ್ಟ್ ನಲ್ಲಿ ಸಲ್ಲಿಸಿದ ಮೇಲ್ಮನವಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ರದ್ದು ಆದ ಸಮಯದಲ್ಲಿ ಹಣ ಕೊಟ್ಟ ವಿಚಾರವನ್ನು ಮೇಲ್ಮನವಿಯಲ್ಲಿ ತಿಳಿಸಲಾಗಿದೆ. ಸದರಿ ಎಸಿ ಕೋರ್ಟ್ ನ ಕೇಸು 2018 ರಲ್ಲಿ ತೀರ್ಮಾನವಾಗಿತ್ತು ಎಂದರೆ ಸರಿ. ಈ ಕೇಸಿನ್ನು ಸಲ್ಲಿಸುವವರೆಗೂ ಅಂದರೆ 2021 ರ ವರೆಗೂ ಯಾವುದೆ ಅಪೀಲು ಸಲ್ಲಿಸಿರುವುದಿಲ್ಲ ಆದರೆ ಸಿವಿಲ್ ನ್ಯಾಯಾಲಯದಲ್ಲಿ ಈ ದಾವೆಯನ್ನು ಹಾಕಿರುತ್ತೇನೆ.

1 ನೇ ಪ್ರತಿವಾದಿಯವರಿಗೆ 4 ಜನ ಮಕ್ಕಳು. ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಜವರನಾಯಕನಿಗೆ ನಮ್ಮ ತಂದೆ ಒಬ್ಬನೆ ಮಗ. 1 ನೇ ಪ್ರತಿವಾದಿ ಪೂಜಾರಿ ಜವರನಾಯಕ ಕುಣಿಯನ ಜವರನಾಯಕನ ಮಗ. 5 ನೇ ವಾದಿ ಮಹದೇವನಾಯಕ 1 ನೇ ಪ್ರತಿವಾದಿಯ ಮಗ. ವಕೀಲರಿಗೆ ಮಾಹಿತಿ ಕೊಡುವ ಸಮಯದಲ್ಲಿ 5 ನೇ ವಾದಿ 1 ನೇ ಪ್ರತಿವಾದಿಯ ಮಗ ಎಂದು ತಿಳಿಸಿರುತ್ತೇವೆ. ನನ್ನ ಮುತ್ತಾತ ಕುಣಿಯನ ಜವರನಾಯಕನಿಗೆ ಒಂದೇ ಮನೆ ಇತ್ತು. ಸದರಿ

ಮನೆಯಲ್ಲಿ ನನ್ನ ತಾತ ಮತ್ತು 1 ನೇ ಪ್ರತಿವಾದಿ ಇಬ್ಬರು ಇದ್ದರು. ಆ ಮನೆಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸದರಿ ಮನೆ ಸರ್ವೆ ನಂ. ನಲ್ಲಿ ಇದ್ದು ಸರ್ವೆ ನಂ. ಅನ್ನು ಸೇರಿಸಲಾಗಿದೆ ಎನ್ನುತ್ತಾರೆ. ಈಗ ನಾವು ಆ ಮನೆಯಲ್ಲಿ ವಾಸವಿರುವುದಿಲ್ಲ ಬೇರೆ ಮನೆಯಲ್ಲಿ ಇದ್ದೇವೆ. ನಾವು ಇರುವ ಇನ್ನೊಂದು ಮನೆಯನ್ನು ಈ ಕೇಸಿನಲ್ಲಿ ಸೇರಿಸಿರುವುದಿಲ್ಲ.

ಕುಣಿಯನ ಜವರನಾಯಕನಿಗೆ ಸರ್ವೆ ನಂ. 32 ರಲ್ಲಿ 3 ಎಕರೆ 5 ಗುಂಟೆ ಜಮೀನು ಇದೆ. ಇನ್ನೂ ಎರಡೂ ಸರ್ವೆ ನಂ. ಗಳು ಇದ್ದು, ಅವುಗಳು ಸರ್ವೆ ನಂ. 139, ರಲ್ಲಿ 29 ಗುಂಟೆ, ಸರ್ವೆ ನಂ. 137 ರಲ್ಲಿ 26 ಗುಂಟೆ ಜಮೀನು ಇದೆ. ಮೂರು ಜಮೀನುಗಳು ಹೊರತು ಪಡಿಸಿ ಬೇರೆ ಯಾವುದೆ ಜಮೀನುಗಳು ಇರುವುದಿಲ್ಲ. ನಮ್ಮ ತಾತ ಮತ್ತು 1 ನೇ ಪ್ರತಿವಾದಿ ಈ ಮೊದಲೇ ಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಜವರನಾಯಕನಿಗೆ ಇನ್ನೊಬ್ಬ ಅಣ್ಣ ಇದ್ದಾರೆಯೇ ಎಂದರೆ ಇಲ್ಲ.

1975 ರಲ್ಲಿ ಭೋಗ್ಯವನ್ನು ರದ್ದು ಪಡಿಸುವಂತೆ ನರಸಿಂಹಶೆಟ್ಟಿರವರನ್ನು ಮೌಖಿಕವಾಗಿ ಆಗಲಿ ಅಥವಾ ಲಿಖಿತವಾಗಿ ಆಗಲಿ ನಮ್ಮ ತಾತ ಆಗಲಿ, ಅವರ ತಂದೆ ಆಗಲಿ / ಪೂರ್ವಜರಾಗಲಿ ಯಾರೂ ಕೂಡ ಕೇಳಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಪುನಃ ಹಾಗೆ ಕೇಳಿದ್ದು, ಆದರೆ ಅವರು ಬರಲಿಲ್ಲ ಎನ್ನುತ್ತಾರೆ. ಹಾಗೆ ಬರಲಿಲ್ಲವೆಂದ ಮಾತ್ರಕ್ಕೆ ಕೇಸು ಹಾಕುವುದಾಗಲಿ ಅಥವಾ ಲಿಖಿತವಾಗಿ ನೊಟೀಸು ಕೊಡುವುದಾಗಿ ಮಾಡಿಲ್ಲ. ಹಣವನ್ನು ಕೊಟ್ಟು ಮೌಖಿಕವಾಗಿ ಕೇಳಿದರೂ ಅವರು ಬಿಟ್ಟಿರುವುದಿಲ್ಲ ಎಂದು ತೋರಿಸಲು ಯಾರಾದರೂ ಸಾಕ್ಷಿ ಇದ್ದಾರಾ ಎಂದರೆ ಇರುವುದಿಲ್ಲ. ಈಗಲೂ ಕೂಡ 1 ನೇ ದಾವಾ ಐಟಂ ಸ್ವತ್ತಿನಲ್ಲಿ ನರಸಿಂಹಶೆಟ್ಟಿ ರವರ ವಾಸುದಾರರಾದ 2 ರಿಂದ 5 ನೇ ಪ್ರತಿವಾದಿಯವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ, ನಾವೇ ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ. 46 ವರ್ಷಗಳವರೆಗೂ ಅವರೆ ಸ್ವಾಧೀನದಲ್ಲಿ ಇದ್ದರು, ನಂತರ ನಾವು ಈ ಕೇಸನ್ನು ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.